# ರಾಗಾಭಕ್ತಿ



✿ ರಾಗಾಭಕ್ತಿ ಉಂಟಾದರೆ, ಅಂದರೆ ಭಗವಂತನಲ್ಲಿ ಪ್ರೀತಿ ಉಂಟಾದರೆ ಆಗ ಆತನನ್ನು ಪಡೆಯಬಹುದು. ವೈಧೀಭಕ್ತಿ ಎಷ್ಟು ಬೇಗ ಉತ್ಪನ್ನವಾಗುತ್ತದೆಯೋ ಅಷ್ಟೇ ಬೇಗ ಹೊರಟು ಹೋಗುತ್ತದೆ. ಇಷ್ಟೊಂದು ಜಪ ಮಾಡಬೇಕು, ಇಷ್ಟೊಂದು ಧ್ಯಾನ ಮಾಡಬೇಕು, ಇಂಥಿಂಥ ಉಪಚಾರಗಳಿಂದ ಪೂಜೆ ಮಾಡಬೇಕು, ಇವುಗಳಿಗೆಲ್ಲ 'ವೈಧೀಭಕ್ತಿ' ಅಂತ ಹೆಸರು. ಇದು ಬರುವುದಕ್ಕೂ ತಡವಿಲ್ಲ ; ಹೋಗುವುದಕ್ಕೂ ತಡವಿಲ್ಲ.

✿ ಅನೇಕರು ಹೇಳುತ್ತಾರೆ, 'ಅಣ್ಣಂದಿರಾ, ನಾವು ಎಷ್ಟು ಸಲ ಹವಿಷ್ಯಾನ್ನ ತಿಂದೆವು ಏನು ಕತೆ! ಎಷ್ಟೊಂದು ಸಲ ಮನೆಯಲ್ಲಿ ಪೂಜೆ ನಡೆಸಿದೆವು ಏನು ಕತೆ! ಆದರೆ ಕೊನೆಗೆ ನಮಗೆ ಏನು ತಾನೆ ದೊರಕಿತು?' ಅಂತ. ಆದರೆ ರಾಗಾಭಕ್ತಿಯಿಂದ ವಿಮುಖವಾಗುವಂತೇ ಇಲ್ಲ.

✿ ಯಾರಿಗೆ ರಾಗಾಭಕ್ತಿ ಉಂಟಾಗುತ್ತದೆ ಎಂಬುದು ಗೊತ್ತೇನು? ಯಾರು ಪೂರ್ವಜನ್ಮಗಳಲ್ಲಿ ಬಹಳವಾಗಿ ಸಾಧನೆ ಮಾಡಿದ್ದಾರೊ ಅಥವಾ ಯಾರು ನಿತ್ಯಸಿದ್ಧರೋ ಅವರಿಗೆ. ಉದಾಹರಣೆಗಾಗಿ ಪಾಳುಬಿದ್ದಿರುವ ಮನೆಯನ್ನು ತೆಗೆದುಕೊಳ್ಳಿ. ಅದರಲ್ಲಿ ಬೆಳೆದಿರುವ ಗಿಡಗಂಟೆಗಳನ್ನು ಮತ್ತು ಕಸಕಡ್ಡಿಗಳನ್ನು ತೆಗೆಯುವಾಗ ಪೈಪು ಹಾಕಿರುವ ಒಂದು ಚಿಲುಮೆಯನ್ನು ಕಂಡಂತೆ. ಅದು ಮಣ್ಣು ಮತ್ತು ಇಟ್ಟಿಗೆಗಳ ಚೂರುಗಳಿಂದ ಮುಚ್ಚಿಹೋಗಿದ್ದಿತು. ಅವುಗಳನ್ನು ತೆಗೆದ ಒಡನೆಯೆ ನೀರು 'ಜಳ ಜಳ' ಅಂತ ಉಕ್ಕಿ ಬರಲಾರಂಭಿಸುತ್ತದೆ.

✿ ಯಾರಿಗೆ ರಾಗಾಭಕ್ತಿ ಉಂಟಾಗಿದೆಯೊ ಅವರು ಎಂದಿಗೂ ಹೇಳರು, 'ಅಣ್ಣಂದಿರಾ, ಎಷ್ಟೊಂದು ಹವಿಷ್ಯಾನ್ನ ತಿಂದೆವು ಏನು ಕತೆ! ಆದರೆ ದೊರೆತುದೇನು?' ಅಂತ. ಯಾರು ಹೊಸದಾಗಿ ವ್ಯವಸಾಯ ಮಾಡುತ್ತಾರೋ ಅವರು ಬೆಳೆ ನಷ್ಟವಾದರೆ ವ್ಯವಸಾಯವನ್ನೇ ಬಿಟ್ಟುಬಿಡುತ್ತಾರೆ. ಆದರೆ ಯಾರು ವಂಶಪಾರಂಪರ್ಯದಿಂದ ವ್ಯವಸಾಯ ಮಾಡಿ ಬಂದಿದ್ದಾರೋ, ಅವರು ಬೆಳೆ ಆದರೂ ಸರಿಯೆ ಹೋದರೂ ಸರಿಯೆ ವ್ಯವಸಾಯವನ್ನು ಮಾತ್ರ ಎಂದಿಗೂ ಬಿಡರು. ಅವರ ತಂದೆ, ತಾತ ಎಲ್ಲಾ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ; ಅವರಿಗೆ ಗೊತ್ತಿದೆ ವ್ಯವಸಾಯ ಮಾಡೇ ತಿನ್ನಬೇಕು ಅಂತ.

✿ ಯಾರಿಗೆ ರಾಗಾಭಕ್ತಿ ಉಂಟಾಗಿರುತ್ತದೆಯೊ ಅವರೇ ಆತನ ನಿಜವಾದ ಭಕ್ತರು. ಭಗವಂತ ಅವರ ಭಾರವನ್ನು ಹೊತ್ತುಕೊಳ್ಳುತ್ತಾನೆ. ಆಸ್ಪತ್ರೆಗೆ ಹೋಗಿ ದಾಖಲಾದರೆ – ಗುಣವಾಗುವವರೆಗೂ ಡಾಕ್ಟರ್ ಬಿಟ್ಟುಕೊಡುವುದಿಲ್ಲ. ಭಗವಂತ ಯಾರ ಕೈಯನ್ನು ಹಿಡಿದಿರುವನೋ ಅವರು ಯಾವುದಕ್ಕೂ ಭಯಪಡಬೇಕಾಗಿಲ್ಲ. ಯಾವ ಮಗು ಗದ್ದೆ ತೆವರಿಯ ಮೇಲೆ ನಡೆಯುವಾಗ ತಂದೆಯ ಕೈಯನ್ನು ಹಿಡಿದು ನಡೆಯುತ್ತಿರುವುದೋ ಅದು – ಬೇರೆ ಕಡೆ ಮನಸ್ಸಿಟ್ಟು ತಂದೆಯ ಕೈ ಬಿಟ್ಟರೆ – ಬಿದ್ದರೂ ಬೀಳಬಹುದು. ಆದರೆ ತಂದೆ ಮಗುವಿನ ಕೈಯ ಹಿಡಿದಿದ್ದರೆ ಅದು ಬೀಳುವ ಸಂಭವವೇ ಇಲ್ಲ.

✿ ಭಗವಂತನ ಮೇಲೆ ಪ್ರೀತಿ ಉಂಟಾದರೆ, ಕೇವಲ ಆತನ ಸಂಬಂಧವಾಗಿಯೇ ಮಾತುಕತೆಯಾಡಲು ಇಚ್ಛೆಯಾಗುತ್ತದೆ. ಯಾರು ಯಾರನ್ನು ಪ್ರೀತಿಸುತ್ತಾರೊ ಅವರು ಅವರ ವಿಷಯವಾಗಿ ಕೇಳಲು ಮತ್ತು ಮಾತನಾಡಲು ಇಚ್ಛಿಸುತ್ತಾರೆ. ಯಾರಿಗೆ ಪಾರಿವಾಳವನ್ನು ಕಂಡರೆ ಪ್ರೀತಿಯೋ ಅವರ ಮುಂದೆ ಅದನ್ನು ಹೊಗಳಿದರೆ ಅವರಿಗೆ ಅತ್ಯಂತ ಆನಂದ.

✿ ಭಗವಂತನಲ್ಲಿ ಅನುರಾಗ ಉಂಟಾದರೆ ಸಾಮಾನ್ಯ ಘಟನೆಯಿಂದಲೇ ಭಕ್ತಿ ಉದ್ದೀಪನೆಯಾಗಿಬಿಡುತ್ತದೆ. ಆಗ ಒಂದು ಸಲ ರಾಮನಾಮ ಜಪಿಸಿದರೆ ಅದಕ್ಕೆ ಒಂದು ಕೋಟಿ ಸಂಧ್ಯಾವಂದನೆಗಳ ಫಲ ದೊರೆತುಬಿಡುತ್ತದೆ. ಮೇಘವನ್ನು ನೋಡಿದೊಡನೆಯೇ ನವಿಲಿಗೆ ರಾಗದ ಉದ್ದೀಪನೆಯಾಗಿಬಿಡುತ್ತದೆ. ಆನಂದದಿಂದ ಪುಕ್ಕವನ್ನು ಕೆದರಿ ನಲಿಯುತ್ತದೆ. ಶ್ರೀಮತಿಗೂ (ರಾಧೆ) ಹಾಗೆ ಆಗುತ್ತಿತ್ತು. ಮೇಘವನ್ನು ನೋಡಿದೊಡನೆಯೆ ಆಕೆಗೆ ಕೃಷ್ಣನ ನೆನಪು ಬಂದುಬಿಡುತ್ತಿತ್ತು.

✿ ಯಾರಿಗೆ ಭಗವದ್ಭಾವನೆಯ ಉದ್ದೀಪನೆಯಾಗುತ್ತದೆ? ವಿಷಯಾತ್ಮಿಕ ಬುದ್ಧಿಯನ್ನು ತ್ಯಜಿಸಿರತಕ್ಕವರಿಗೆ. ಯಾರ ವಿಷಯರಸ ಬತ್ತಿಹೋಗಿರುವುದೋ ಅವರಿಗೆ ಒಂದು ಸ್ವಲ್ಪದರಿಂದಲೇ ಭಗವದ್ಭಾವನೆಯ ಉದ್ದೀಪನೆಯಾಗಿ ಬಿಡುತ್ತದೆ. ಬೆಂಕಿಕಡ್ಡಿ ಒದ್ದೆಯಾಗಿದ್ದರೆ ಒಂದು ಸಾವಿರ ಸಲ ಗೀಚಿದರೂ ಅದು ಹತ್ತದು. ಆದರೆ ಒಣಗಿದರೆ ಒಂದು ಸ್ವಲ್ಪ ಗೀಚಿದರೇ ಸಾಕು, 'ಧಗ್' ಎಂದು ಹತ್ತಿಕೊಂಡು ಬಿಡುತ್ತದೆ.

✿ ದೇಹದ ಸುಖವಂತು ಇದ್ದೇ ಇದೆ. ಯಾರಿಗೆ ಭಗವಂತನ ಸಾಕ್ಷಾತ್ಕಾರ ಆಗಿದೆಯೋ ಅವರ ಮನಸ್ಸು ಪ್ರಾಣ ದೇಹ ಆತ್ಮ ಎಲ್ಲವನ್ನೂ ಆತನಿಗೆ ಅರ್ಪಿಸಿಬಿಟ್ಟಿರುತ್ತಾರೆ.

✿ ಪ್ರೇಮ ಅಂದರೆ ಭಗವಂತನಲ್ಲಿ ಅಂಥ ಅಗಾಧವಾದ ಅನುರಾಗ. ಅದರ ದೆಸೆಯಿಂದ ಜಗತ್ತೂ ಮರೆತುಹೋಗಿಬಿಡುತ್ತದೆ. ಜೊತೆಗೆ ಅಷ್ಟೊಂದು ಪ್ರಿಯವಾಗಿರುವ ಸ್ವಂತ ದೇಹ ಕೂಡ ಮರೆತುಹೋಗಿಬಿಡುತ್ತದೆ. ಅದಕ್ಕೆ 'ಪ್ರೇಮ' ಅಂತ ಹೆಸರು.

ಶ್ರೀರಾಮಕೃಷ್ಣ ವಚನವೇದದಿಂದ